ದಿನಾಂಕ: 28.04.2022 ರಂದು ಬೆಳಗ್ಗೆ 11.30 ಗಂಟೆಗೆ ರಾಜಾಜಿನಗರ ವಾರ್ಡ್ ನಂ. 100 ರಲ್ಲಿ ಶ್ರೀಮತಿ ಸಾವಿತ್ರಿ ಪಾಟೀಲ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀಮತಿ ಸಾವಿತ್ರಿ ಪಾಟೀಲ್, ನೋಡಲ್ ಅಧಿಕಾರಿಗಳು
2. ಶ್ರೀ ಸುಭಾಸ್‌ಪಾಟೀಲ್, ಸಹಾಯಕ ಅಭಿಯಂತರರು, ವಾರ್ಡ್ ನಂ. 100
3. ಶ್ರೀ ಪವನ್.ಆರ್.ಜಿ, ಸಹಾಯಕ ಅಭಿಯಂತರರು, ವಾರ್ಡ್ ನಂ. 100
4. ಶ್ರೀ ಲತಾ.ಟಿ.ಎಸ್. ಬೆಸ್ಕಾಂ ಅಭಿಯಂತರರು
5. ಶ್ರೀ ಎನ್. ಮಂಜುನಾಥ್, ತೋಟಗಾರಿಕೆ ಇಲಾಖೆ
6. ಶ್ರೀ ಹರೀಶ್, ಮಾರ್ಷಲ್
7. ಶ್ರೀ ಗಿರೀಶ್, ಸದಸ್ಯರು
8. ಶ್ರೀಮತಿ ಕೆ. ಚಂದ್ರಕಲಾ, ಟೈಲರಿಂಗ್ ಟೀಚರ್
9. ಶ್ರೀ ಮೋಹನ್ ಕುಮಾರ್, ಬಿ.ಡಬ್ಲ್ಯೂ.ಎಸ್.ಎಸ್.ಬಿ.
10. ಶ್ರೀ ಶೈಲ ಪಾಟೀಲ್. ಪಿ.ಸಿ
11. ಶ್ರೀ ಕೆ. ಸೆಲ್ವಕುಮಾರ್, ಸದಸ್ಯರು
12. ಶ್ರೀ ಶಿವರಾಂ. ಎ.ಸಿ.ಎಫ್
13. ಶ್ರೀ ಶ್ರೀನಾಥ್, ಅರಣ್ಯ ಇಲಾಖೆ
14. ಶ್ರೀ ರಘು, ಘನತ್ಯಾಜ್ಯ ನಿರ್ವಾಹಕರು
15. ಶ್ರೀ ನಾರಾಯಣಸ್ವಾಮಿ, ಎ.ಎಸ್.ಐ.
16. ಶ್ರೀಮತಿ ಶ್ರೀಮತಿ ಸಂಧ್ಯಾ ಘನ ತ್ಯಾಜ್ಯ ಇಲಾಖೆ
17. ಶ್ರೀ ರಂಗಸ್ವಾಮಿ, ಕಂದಾಯ ನಿರೀಕ್ಷಕರು
18. ಶ್ರೀ ವಾಸುಗೌಡ, ಬೀದಿ ದೀಪ ಗುತ್ತಿಗೆದಾರರು
19. ಶ್ರೀ ನರಸಿಂಹ,
20. ಶ್ರೀ ಕಿರಣ್.ಎಂ. ಆರ್. ಸದಸ್ಯರು
21. ಶ್ರೀ ರಮೇಶ್, ಪಶು ಇಲಾಖೆ

ದಿನಾಂಕ: 28.04.2022 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ. 100 ಬಸವೇಶ್ವರನಗರ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ವಾರ್ಡ್ ಸದಸ್ಯರು ವಿಶ್ವೇಶ್ವರಯ್ಯ ಪಾರ್ಕ್ ಹಾಗೂ ನೇತಾಜಿ ಪಾರ್ಕ್‌ಗಳ ಒಣ ಕಸದ ಬಗ್ಗೆ ಚರ್ಚಿಸಿದರು. ಇದಕ್ಕೆಉತ್ತರವಾಗಿ ತೋಟಗಾರಿಕೆ ಇಲಾಖೆಯ ಬಾಸ್ಕರ್ ರವರು ಹಂತ ಹಂತವಾಗಿ ಸ್ವಚ್ಛತೆ ಮಾಡುವುದಾಗಿ ಸಭೆಯಲ್ಲಿ ತಿಳಿಸಿದರು.

2. ವಾರ್ಡ್ ಸದಸ್ಯರು ಹಾಗೂ ನೋಡಲ್ ಅಧಿಕಾರಿಗಳು ಒಣ ಕಸ ಕಾಂಪೋಸ್ಟ್ ಮಾಡುವುದರ ಬಗ್ಗೆ ಸಭೆಯಲ್ಲಿ ಚರ್ಚಿಸಿದರು ಇದಕ್ಕೆ ಉತ್ತರವಾಗಿ ವಾರ್ಡ್ ಅಭಿಯಂತರರು ನೇತಾಜಿ ಹಾಗೂ ಕುವೆಂಪು ಪಾರ್ಕ್‌ಗಳ ಸಿವಿಲ್ ಕಾಮಗಾರಿಗಳನ್ನು ಶೀಘ್ರವೇ ಕೈಗೊಂಡು ಅದರ ಜೊತೆ ಕಾಂಪೋಸ್ಟ್ ಮಾಡುವ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು

3. ವಾರ್ಡ್ ಸದಸ್ಯರಾದ ಶ್ರೀ ಗಿರೀಶ್ ಮತ್ತು ಸೆಲ್ವಕುಮಾರ್ ರವರು ವಾರ್ಡ್ ರಸ್ತೆಗಳಲ್ಲಿ ಬಾಗಿರುವ ಹಾಗೂ ಒಣಗಿರುವ ಮರದ ಕೊಂಬೆಗಳನ್ನು ತೆರವುಗೊಳಿಸುವಂತೆ ಸಭೆಯಲ್ಲಿ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ಶ್ರೀ ಶ್ರೀನಾಥ್, ಅರಣ್ಯ ಇಲಾಖೆಯವರು ಶೀಘ್ರವಾಗಿ ಮರದ ಕೊಂಬೆಗಳನ್ನು ತೆರವುಗೊಳಿಸುವಂತೆ ಕ್ರಮ ಕೈಗೊಳ್ಳೂವುದಾಗಿ ಸಭೆಯಲ್ಲಿ ತಿಳಿಸಿದರು.

ಪು.ತಿ.ನೋ.

4. ವಾರ್ಡ್ ಸದಸ್ಯರಾದ ಶ್ರೀ ಗಿರೀಶ್ ರವರು ಕೆಲವೊಂದು ಕಂಬಗಳಿಗೆ ಎಬಿ ಕೇಬಲ್ ಹಾಕದೆ ಇರುವ ಬಗ್ಗೆ ಪ್ರಸ್ತಾಪಿಸಿದರು. ಇದಕ್ಕೆ ಉತ್ತರವಾಗಿ ಶ್ರೀಮತಿ ಲತಾ ರವರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

5. ಶ್ರೀಮತಿ ಲತಾ, ಬೆಸ್ಕಾಂ ರವರು ಬೀದಿ ದೀಪದ ಗುತ್ತಿಗೆದಾರರು ನೇರವಾಗಿ ಸಂಪರ್ಕ ಮಾಡುತ್ತಿರುವುದರ ಬಗ್ಗೆ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ಶ್ರೀ ವಾಸುಗೌಡ, ಬೀದಿ ದೀಪ ಗುತ್ತಿಗೆದಾರರು ಕ್ರಮ ಕೈಗೊಳ್ಳುವುದಾಗಿ ಚರ್ಚಿಸಿದರು.

6. ವಾರ್ಡ್ ಸದಸ್ಯರು ಹಾಗೂ ಸಂಚಾರಿ ಪೋಲಿಸ್ ಠಾಣೆಯ ಸಿಬ್ಬಂಧಿ ರವರು ಶಂಕರ್ ಮಠದ ಹತ್ತಿರ ಸಿಗ್ನಲ್ ಲೈಟ್ಸ್ ರಸ್ತೆಯಲ್ಲಿದ್ದು, ಬಾರಿ ವಾಹನಗಳಿಗೆ ತಿರುವು ತೆಗೆದುಕೊಳ್ಳುವಾಗ ತೊಂದರೆಯಾಗುತ್ತಿರುವುದರ ಬಗ್ಗೆ ಸಭೆಯಲ್ಲಿ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ವಾರ್ಡ್ ಅಭಿಯಂತರರು ಹಿರಿಯ ಅಧಿಕಾರಿಗಳ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

7. ವಾರ್ಡ್ ಸದಸ್ಯರಾದ ಶ್ರೀ ಗಿರೀಶ್ ರವರು ತಿಮ್ಮಯ್ಯ ರಸ್ತೆಯಲ್ಲಿ ವಾಹನ ಸಂಚಾರ ದಟ್ಟಣೆಯಾಗಿದ್ದು, ವಾಹನ ಸವಾರರಿಗೆ ಹಾಗೂ ಪಾದಚಾರಿಗಳಿಗೆ ತೊಂದರೆಯಾಗುತ್ತಿದ್ದು, ರಸ್ತೆಯ ಒಂದು ಬದಿ ವಾಹನ ನಿಲುಗಡೆಯ ಬಗ್ಗೆ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ಶ್ರೀ ಶೈಲ್‌ಪಾಟೀಲ್, ವಿಜಯನಗರ ಸಂಚಾರಿ ಠಾಣೆಯವರು ಹಿರಿಯ ಅಧಿಕಾರಿಗಳ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು

8. ಶ್ರೀಮತಿ ಸಂದ್ಯಾ, ಆರೋಗ್ಯ ಪರಿವೀಕ್ಷಕರು, ರವರು ಕೊರೋನಾ 4ನೇ ಅಲೆಯು ಹೆಚಾಗುತ್ತಿರುವ ಹಿನ್ನಲೆಯಲ್ಲಿ , ಜನ ಸಾಮನ್ಯರಿಗೆ ಕೊರೋನ ಪಾಸಿಟಿವ್ ಟೆಸ್ಟಿಂಗ್ ಪ್ರಾಂಭಿಸಲಾಗಿದ್ದು, ವಾರ್ಡ್ ಸದಸ್ಯರಿಗೆ ಹಾಗೂ ಸಾರ್ವಜನಿಕರ ಸಹಕಾರ ಕೋರಿದರು.

9. ವಾರ್ಡ್ ನಂ. 100ರ ವ್ಯಾಪ್ತಿಯಲ್ಲಿ ಬರುವ ಹಾಲಿ ಇರುವ ಬಿ.ಬಿ.ಎಂ.ಪಿ. ವಾರ್ಡ್ ಕಛೇರಿಯನ್ನು ತೆರವುಗೊಳಿಸಿ ಹೊಸದಾಗಿ ಬಹುಮಹಡಿಗಳ ಹಾಗೂ ಎಲ್ಲಾ ಇಲಾಖೆಗಳು ಒಂದೇ ಕಡೆ ಕಾರ್ಯನಿರ್ವಹಿಸುವಂತೆ ಸಭೆಯಲ್ಲಿ ಚರ್ಚಿಸಿದರು. ಅನುಮೋದನೆ ದೊರೆತ ನಂತರ ಬೇಕಾಗಿರುವ ಅನುದಾನವನ್ನು ದೊರಕಿಸಿಕೊಡುವುದಾಗಿ ಸಭೆಯಲ್ಲಿ ಸದಸ್ಯರೆಲ್ಲರು ಕೋರಿದರು. ಇದಕ್ಕೆ ಉತ್ತರವಾಗಿ ವಾರ್ಡ್ ಅಭಿಯಂತರರು ಕಡತವನ್ನು ಮೇಲಾಧಿಕಾರಿ ರವರಿಗೆ ಮಂಡಿಸುವುದಾಗಿ ತಿಳಿಸಿದರು.

10. ವಾರ್ಡ್ ಸದಸ್ಯರು ಪಾರ್ಕ್ ಗಳಲ್ಲಿ ಸೊಳ್ಳೆ ಕಾಟ ಜಾಸ್ತಿಯಾಗಿದ್ದು, ಹಿರಿಯ ನಾಗರೀಕರಿಗೆ ಹಾಗೂ ಚಿಕ್ಕ ಮಕ್ಕಳಿಗೆ ತೊಂದರೆಯಾಗುತ್ತಿದ್ದು, ಸೊಳ್ಳೆ ನಿಯಂತ್ರಣಕ್ಕಾಗಿ ಔಷಧಿ ಸಿಂಪಡಣೆ ಮಾಡಿಸುವಂತೆ ಕೋರಿದರು. ಇದಕ್ಕೆ ಉತ್ತರವಾಗಿ ಶ್ರೀಮತಿ ಸಂಧ್ಯಾ ರವರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

11. ವಾರ್ಡ್ ವ್ಯಾಪ್ತಿಯಲ್ಲಿ ವಾರ್ಡಿನ ಸದಸ್ಯರು ರಸ್ತೆಯಲ್ಲಿ ಬಿದ್ದಿರುವ ಗುಂಡಿ ಮುಚ್ಚುವ ಕಾರ್ಯದ ಬಗ್ಗೆ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ಸ.ಕಾ.ನಿ.ಅ ಹಾಗೂ ವಾರ್ಡ್ ಸ.ಅ. ರವರು ಕಾಮಗಾರಿಯು ನಿರಂತರ ಮಳೆಯಿಂದಾಗಿ ಸ್ವಲ್ಪ ನಿಧಾನ ಗತಿಯಲ್ಲಿ ಚಾಲ್ತಿಯಲ್ಲಿರುತ್ತದೆ. ಮಳೆ ನಿಂತ ನಂತರ ಟಾರ್ ಹಾಕುವ ಕಾಮಗಾರಿಯ ಕೆಲಸವನ್ನು ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.

12. ಜಿಯೋ ಕೇಬಲ್ ಅಳವಡಿಸಲು ರಸ್ತೆಯನ್ನು ಕತ್ತರಿಸಿ, ಸರಿಯಾಗಿ ಗುಂಡಿಗಳನ್ನು ಮುಚ್ಚದೇ ಇರುವುದರಿಂದ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದಾಗಿ ಸಭೆಯಲ್ಲಿ ವಾರ್ಡ್ ಕಮಿಟಿ ಸದಸ್ಯರು ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಗುತ್ತಿಗೆದಾರರನ್ನು ಕರೆಸಿ ಸರಿಯಾಗಿ ಗುಂಡಿಗಳನ್ನು ಮುಚ್ಚುವಂತೆ ತಿಳಿಸಲು ವಾರ್ಡ್ ಅಭಿಯಂತರರಿಗೆ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ / AE
ವಾರ್ಡ್ ಸಮಿತಿ
ವಾರ್ಡ್ ನಂ. 100